**ಬೆಂಗಳೂರು ವಿಶ್ವವಿದ್ಯಾಲಯ**

ಜ್ಞಾನಭಾರತಿ ಆವರಣ, ಬೆಂಗಳೂರು-56

ಸಂಖ್ಯೆ:ಎಸಿಎ-1/ಎ3/ಬಿ.ಇಡಿ/ಸ.ಕೋ.ಸೀಟು/2018-19

ದಿನಾಂಕ: 12.01.2019

-:: ಸುತ್ತೋಲೆ ::-

ವಿಷಯ:2018-19ನೇ ಸಾಲಿನಲ್ಲಿ ಸರ್ಕಾರದ ಕೋಟಾದಡಿ ಹಂಚಿಕೆಯಾಗಿ ಖಾಲಿ ಉಳಿದ ಬಿ.ಇಡಿ ಸೀಟುಗಳನ್ನು ಆಡಳಿತ ಮಂಡಳಿಯ ಕೋಟಾದಡಿ ಭರ್ತಿಮಾಡಿಕೊಳ್ಳಲು ಬೆಂಗಳೂರು ವಿಶ್ವವಿದ್ಯಾಲಯ ವ್ಯಾಪ್ತಿಯ ಶಿಕ್ಷಣ ಮಹಾವಿದ್ಯಾಲಯಗಳಿಗೆ ಅನುಮತಿ ನೀಡುವ ಬಗ್ಗೆ.

ಉಲ್ಲೇಖ:1. ಸರ್ಕಾರದ ಆದೇಶ ಸಂಖ್ಯೆ: ಇಡಿ 389 ಯುಆರ್‌ಸಿ 2018, ಬೆಂಗಳೂರು ದಿನಾಂಕ: 22.11.2018.

2. ಕುಲಪತಿಯವರ ಅನುಮೋದನೆ ದಿನಾಂಕ: 20.12.2018

** * **

ಕರ್ನಾಟಕ ರಾಜ್ಯ ಸರ್ಕಾರದ ಉಲ್ಲೇಖಿತ ಆದೇಶದಲ್ಲಿ 2018-19ನೇ ಸಾಲಿಗೆ ಸರ್ಕಾರಿ ಕೋಟಾದಡಿ ಹಂಚಿಕೆಯಾಗದೇ ಖಾಲಿ ಉಳಿದಿರುವ ಬಿ.ಇಡಿ ಸೀಟುಗಳು ಹಾಗೂ ಹಂಚಿಕೆಯಾದ ಸೀಟುಗಳ ಪೈಕಿ ವಿದ್ಯಾರ್ಥಿಗಳು ದಾಖಲಾಗದೇ ಮರು ಹಂಚಿಕೆ ಅಥವಾ ಮರು ಕೌನ್ಸಿಲಿಂಗ್ ನಂತರವೂ ಖಾಲಿ ಉಳಿದಿರುವ ಬಿ.ಇಡಿ ಸೀಟುಗಳು ಸೇರಿದಂತೆ, ಸರ್ಕಾರಿ ಕೋಟಾದಡಿಯ ಒಟ್ಟಾರೆ ಖಾಲಿ ಇರುವ ಬಿ.ಇಡಿ ಸೀಟುಗಳನ್ನು ವಿಶ್ವವಿದ್ಯಾಲಯವು ನಿಗಧಿಗೊಳಿಸಿರುವ ದಿನಾಂಕದೊಳಗಾಗಿ ಆಯಾ ಕಾಲೇಜುಗಳ ಆಡಳಿತ ಮಂಡಳಿಯಿಂದ ಭರ್ತಿಮಾಡಲು Karnataka Selection of Candidate for admission to Teachers Certificate Higher Course (TCH) and Bachelor of Education Course (B.Ed) Amendment rules, 2000ರ ನಿಯಮ 7ರ ಉಪನಿಯಮ 8ರನ್ವಯ ಸರ್ಕಾರದ ಅನುಮತಿ ನೀಡಿ ಆದೇಶಿಸಿದೆ.

ಸರ್ಕಾರದ ಕೋಟಾದಡಿ ಖಾಲಿ ಉಳಿದಿರುವ ಬಿ.ಇಡಿ ಸೀಟುಗಳನ್ನು ಕಾಲೇಜುಗಳ ಆಡಳಿತ ಮಂಡಳಿಗಳಿಂದ ಭರ್ತಿಮಾಡಲು ನೀಡಲಾಗಿರುವ ಪೂರ್ವೋಕ್ತ ಅನುಮತಿಯು ಈ ಕೆಳಕಂಡ ಷರತ್ತು ಮತ್ತು ನಿಭಂದನೆಗಳೊಳಪಟ್ಟಿರುತ್ತದೆ.

1. ಸರ್ಕಾರಿ ಕೋಟಾದಡಿ ಹಂಚಿಕೆಯಾಗದೇ ಖಾಲಿ ಉಳಿದಿರುವ ಬಿ.ಇಡಿ ಸೀಟುಗಳು ಹಾಗೂ ಹಂಚಿಕೆಯಾದ ಸೀಟುಗಳ ಪೈಕಿ ವಿದ್ಯಾರ್ಥಿಗಳು ದಾಖಲಾಗದೇ ಮರು ಹಂಚಿಕೆ ಅಥವಾ ಮರುಕೌನ್ಸಿಲಿಂಗ್ ನಂತರವೂ ಖಾಲಿ ಉಳಿದಿರುವ ಸೀಟುಗಳ ಸಂಖ್ಯೆಗಳ ನೈಜತೆ ಹಾಗೂ ನಿಖರತೆ ಕೇಂದ್ರೀಕೃತ ದಾಖಲಾತಿ ಘಟಕದ ಅಂಕಿ-ಅಂಶಗಳನ್ನು ಆಧರಿಸಿರತಕ್ಕದ್ದು, ಅಂದರೆ ಈ ಸಂಬಂಧದಲ್ಲಿ ಕೇಂದ್ರೀಕೃತ ದಾಖಲಾತಿ ಘಟಕದ ಅಂಕಿ-ಅಂಶಗಳೇ ಅಂತಿಮ.
2. ನೈಜ ಖಾಲಿ ಸೀಟುಗಳನ್ನು ಮೀರಿ ಭರ್ತಿಮಾಡಿಕೊಳ್ಳಲಾಗುವ ದಾಖಲಾತಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.
3. ಸರ್ಕಾರಿ ಕೋಟಾದಡಿಯ ಸೀಟುಗಳನ್ನು ಭರ್ತಿಮಾಡಿಕೊಂಡಿರುವುದರಲ್ಲಿ ಲೋಪ/ವ್ಯತಿಕ್ರಮಗಳು ಕಂಡುಬಂದಲ್ಲಿ ವಿಶ್ವವಿದ್ಯಾಲಯವು ಸಂಬಂಧಿಸಿದ ಕಾಲೇಜುಗಳ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು.
4. ಸರ್ಕಾರವು ವಿಧಿಸಿರುವ ಶುಲ್ಕವನ್ನು ಹಾಗೂ ವಿಶ್ವವಿದ್ಯಾಲಯವು ನಿಗಧಿಪಡಿಸಿರುವ ಇತರೆ ಶುಲ್ಕಗಳನ್ನು ಮಾತ್ರ ತೆಗೆದುಕೊಳ್ಳತಕ್ಕದ್ದು.
5. ಸರ್ಕಾರದ ಕೋಟಾದಡಿ ಖಾಲಿ ಉಳಿದಿರುವ ಸೀಟುಗಳನ್ನು ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗೆ ಮಾತ್ರ ಮೀಸಲಿಡತಕ್ಕದ್ದು.
6. ಸರ್ಕಾರಿ ಕೋಟಾದಡಿಯ ಖಾಲಿ ಸೀಟುಗಳ ಪ್ರವೇಶ ದಾಖಲಾತಿ ಪ್ರಕ್ರಿಯೆಯನ್ನು ವಿಶ್ವವಿದ್ಯಾಲಯವು ನಿಗಧಿಗೊಳಿಸಿರುವ ದಿನಾಂಕ: 27.12.2018ರ ಒಳಗಾಗಿ ಅಂತಿಮಗೊಳಿಸಿರತಕ್ಕದ್ದು.
7. ಸರ್ಕಾರಿ ಕೋಟಾದಡಿ ಖಾಲಿ ಉಳಿದ ಬಿ.ಇಡಿ ಸೀಟುಗಳನ್ನು ಆಡಳಿತ ಮಂಡಳಿಯಿಂದ ಭರ್ತಿಮಾಡಿಕೊಳ್ಳಲಾಗಿರುವ ಸಂಪೂರ್ಣ ವಿವರಗಳನ್ನು ದಿನಾಂಕ: 18.01.2019ರೊಳಗೆ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ವರದಿ ಮಾಡತಕ್ಕದ್ದು. ತಪ್ಪಿದ್ದಲ್ಲಿ ವಿದ್ಯಾರ್ಥಿಗಳ ಪ್ರವೇಶ ದಾಖಲಾತಿಗೆ ಮಾನ್ಯತೆ/ಅನುಮೋದನೆಯನ್ನು ನೀಡಲಾಗುವುದಿಲ್ಲ.

.....2

8. ಹೈದರಾಬಾದ್-ಕರ್ನಾಟಕದ ಮೀಸಲಾತಿ ಸೀಟುಗಳನ್ನು ನಿಯಮಾನುಸಾರ ಭರ್ತಿಮಾಡತಕ್ಕದ್ದು.

ಈ ಮೇಲ್ಕಂಡ ಷರತ್ತು ಮತ್ತು ನಿಭಂದನೆಗಳನ್ನು ಅಳವಡಿಸಿಕೊಂಡು ಸರ್ಕಾರಿ ಕೋಟಾದಡಿ ಖಾಲಿ ಉಳಿದ ಬಿ.ಇಡಿ ಸೀಟುಗಳನ್ನು ಆಡಳಿತ ಮಂಡಳಿಯಿಂದ ಭರ್ತಿಮಾಡಿಕೊಳ್ಳಲಾಗುವ ಸಂಪೂರ್ಣ ವಿವರಗಳನ್ನು ದಿನಾಂಕ: 18.01.2019ರ ಒಳಗೆ ಸರ್ಕಾರಕ್ಕೆ ಮತ್ತು ವಿಶ್ವವಿದ್ಯಾಲಯಕ್ಕೆ ಏಕಕಾಲದಲ್ಲಿ ಸಲ್ಲಿಸಲು ಸೂಚಿಸಲಾಗಿದೆ.

ಆದೇಶಾನುಸಾರ

ಕುಲಸಚಿವರು 14/1/2019

ಗೆ,

ಎಲ್ಲಾ ಸಂಯೋಜಿತ ಬಿ.ಇಡಿ ಕಾಲೇಜುಗಳ ಪ್ರಾಂಶುಪಾಲರಿಗೆ,
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಪ್ರತಿಗಳು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು) ಬಹುಮಹಡಿ ಕಟ್ಟಡ, ಬೆಂಗಳೂರು.
2. ಡೀನರು, ಶಿಕ್ಷಣ ನಿಕಾಯ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
3. ಆಪ್ತಕಾರ್ಯದರ್ಶಿಗಳು, ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560056.
4. ಕಛೇರಿ ಪ್ರತಿ.